ಜೂಲಿಯಾನಾ ಮಾರ್ಗುಲಸ್, 'ಟೀವಿ ಇಸ್ ಎ ಮಚ್ ಮೋರ್ ಫಿಮೇಲ್ ಫ್ರೆಂಡ್ಲಿ ಎನ್‌ವಿರಾನಮೆಂಟ್' ಎಂದದ್ದೇಕೆಂದರೆ ಟೀವಿಯು ಸಿನಿಮಾ ಹಾಲುಗಳನ್ನೂ, ಗುಡಿ ಗುಂಡಾರಗಳನ್ನೂ, ಮನೆ–ಮನೆಯ ಕಥೆಗಳನ್ನೂ, ದೇಶ–ವಿದೇಶದ ಪ್ರವಾಸೀ ತಾಣಗಳನ್ನೂ, ಬಗೆಬಗೆಯ ಉಣಿಸು–ಉಡುಗೆಗಳನ್ನೂ ಹೆಂಗಸರ ಪದತಲಕ್ಕೇ ತಂದು ಸುರಿದಿದೆ. ಸದ್ಯ ಅಷ್ಟರ ಮಟ್ಟಿಗಿನ ಗಂಡಸರ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಿದೆ. ಅದಕ್ಕಿಂತ ಮುಖ್ಯವಾಗಿ ಮಾಡಿ ಬಡಿಸಿದ ಅಡುಗೆಯ ಬಗ್ಗೆ ಗಂಡಸರ ಕಡೆಯಿಂದ ಬರುತಿದ್ದ 'ಉಪ್ಪು ಕಮ್ಮಿ', 'ಖಾರ ಜಾಸ್ತಿ', 'ಭಯಂಕರ ಹುಳಿ', 'ಸಪ್ಪಗ ಸದೆ', 'ಅನ್ನ ಅಂಟಂಟ್ಯಾಗ್ಯಾದ', 'ಸಾರು ನೀರುನೀರಾಗ್ಯಾದ' ಎಂಬಂಥ ಕಂಪ್ಲೇಂಟುಗಳೇ ಇಲ್ಲದಂತಾಗಿದೆ. ಏಕೆಂದರೆ ಮನೆಗೆ ಮಹಾಪುರುಷ ಬಂದ ತಕ್ಷಣವೇ ಆತನ ಕೈಗೆ ತಾಟು ಕೊಡುವ ಬದಲಿಗೆ ರಿಮೋಟು ಕೊಡುವುದನ್ನು ರೂಢಿಸಿಕೊಂಡಿದ್ದಾರೆ ಹೆಂಗಸರು. ಆಮೇಲೆ ನೋಡಿ ಅದರ ಮಜಾ! ಊಟ ಹೆಂಗಿತ್ತು ಅನ್ನೋದು ಒತ್ತಟ್ಟಿಗಿರಲಿ, ಏನಿತ್ತು ಅನ್ನೋದನ್ನೂ ಗಮನಿಸದೆ ಊಟ ಮುಗಿಸೆದ್ದು ಬಿಡುತ್ತಾನೆ ಮಹಾಶಯ. ಊಟ ಮುಗಿದ ಮೇಲಿನ ಕಥೆ ಹೇಳೋದೇ ಬೇಕಿಲ್ಲ. ರಿಮೋಟು ಮನೆಯ ನಿಜವಾದ ರಿಮೋಟ್ ಕಂಟ್ರೋಲರ್ ಆಗಿರುವ ಮನೆಯಾಕೆಯ ಕೈಗೆ ಅದ್ಯಾವ ಮಾಯದಲ್ಲೋ ಹಸ್ತಾಂತರವಾಗಿಬಿಟ್ಟಿರುತ್ತದೆ! ಅದಕ್ಕೇ ಇರಬೇಕು ಮನೆಯಲ್ಲಿ ಟೀವಿಯ ಬೇಡಿಕೆ ಮೊದಲು ಬರುವುದೇ ಮಹಿಳೆಯರ ಕಡೆಯಿಂದ. ಅವರಿವರ ಕಥೆ ಅಂತಿರಲಿ, ಮದುವೆಯಾದಾಗಿನಿಂದ ಹತ್ತು ವರ್ಷ ನಾವು ಟೀವಿಯಿಲ್ಲದೆ ಇದ್ದೆವು. ಈಗ ಮನೆಯಲ್ಲಿ ಅಮ್ಮ, ಹೆಂಡತಿ, ಇಬ್ಬರು ಹೆಣ್ಣು ಮಕ್ಕಳು... ಎಲ್ಲ ಹೆಂಗಸರೇ ಇರುವುದರಿಂದ ನನ್ನ ಮಾತು ಮೂಲೆಸೇರಿ ಟೀವಿ ರಾಜಠೀವಿಯಲ್ಲಿ ವಿರಾಜಮಾನವಾಗಿದೆ – ನನ್ನನ್ನೇ ಅಣಕಿಸುತ್ತ!

ಟೀವಿ ಬಂದ ಮೇಲೆ ರೇಡಿಯೋ ವಾರ್ತೆ ಕೇಳುವವರ ಸಂಖ್ಯೆ ಗಣನೀಯವಾಗಿ ಕುಸಿದಿದೆ. ಪೇಪರ್ ಓದುವವರು ಪೇಪರಿನಲ್ಲಿಯೇ ಸಮರ್ಪಕವಾದ ಸುದ್ದಿ ಪ್ರಕಟವಾಗಿದ್ದರೂ ಮತ್ತೆ ಯಾವುದಕ್ಕೂ ಇರಲಿ ಅಂತ ರಿಮೋಟ್ ಕೈಗೆತ್ತಿಕೊಂಡು ಟೀವಿ ಮೇಲೆ ಕಣ್ಣು ಕೀಲಿಸಿಕೊಂಡು ಕೂರುವಂತಾಗಿದೆ. ಹಿಂದೆ ಯಾವಾಗಲೋ ಮಹಾಭಾರತದಲ್ಲಿ ಪಾಂಡವರು ಮತ್ತು ಕೌರವರ ನಡುವೆ ನಡೆಯುತ್ತಿರುವ ಯುದ್ಧದ ವಿವರಣೆಯನ್ನು ಧೃತರಾಷ್ಟ್ರನಿಗೆ ಸಂಜಯನು ನೀಡುತ್ತಿದ್ದನಂತೆ. ಇಂದು ಸ್ವಂತ ವಿವೇಚನೆಯ ಕಣ್ಣು ಕಳೆದುಕೊಂಡು ಸಮಾಜದಲ್ಲಿ ಬಹಳಷ್ಟು ಜನರು ಧೃತರಾಷ್ಟ್ರರಾಗಿದ್ದಾರೆ. ಆದರೆ ಅವರಿಗೆ ಹೊರಜಗತ್ತಿನ ವಿವರಗಳೆಲ್ಲ ಕುಳಿತಲ್ಲಿಗೇ ಬೇಕು. ಅದಕ್ಕಾಗಿಯೆಂದೇ ಇಂದು ಪ್ರತಿ ಮನೆಯಲ್ಲಿ ಆಧುನಿಕ ಸಂಜಯನ ಸ್ಥಾನದಲ್ಲಿ ಟೀವಿ ಬಂದು ಕೂತಿದೆ. ಹೊರಗಿನ ಕಥೆ ಹೇಳುವೆ ನಿಮಗೆ ಎನ್ನುತ್ತ ಮನೆ ಒಳಗೆ ಬಂದು ಕೂತ ಟೀವಿಯೇ ಇಂದು ಹಲವಾರು ಮನೆಗಳಲ್ಲಿ ಹಲವು ಬಗೆಯ ಮಹಾಭಾರತಗಳನ್ನು ಸೃಷ್ಟಿಸಿಬಿಟ್ಟಿದೆ. 'ಆಧುನಿಕ ಸಂಜಯ'ನ ಈ ಮುಗಿಯದ ಮಹಾಭಾರತದ ಮೊದಲ ಕಂತನ್ನು ನಿಮ್ಮ ಮುಂದೆ ಸಾದರಪಡಿಸಿರುವೆ. ಬಾಕಿ ಕಂತುಗಳೆಲ್ಲ ನಿಮಗೆ ಗೊತ್ತಿಲ್ಲದೆ ಏನಿಲ್ಲ. ಯೋಚಿಸಿ.



### ಚಿದಾನಂದ ಸಾಲಿ

ಕನ್ನಡದ ಮುಂಚೂಣಿಯ ಈ ಲೇಖಕ ರಾಯಚೂರಿನವರು. ಗಣಿತಶಾಸ್ತ್ರ, ಪತ್ರಿಕೋದ್ಯಮ, ಇಂಗ್ಲಿಷ್, ಶಿಕ್ಷಣಶಾಸ್ತ್ರ ಹಾಗೂ ಕನ್ನಡದಲ್ಲಿ ಸ್ನಾತಕೋತ್ತರ ಪದವೀಧರರು. ಕಥೆ, ಕವಿತೆ, ಗಜಲ್, ನಾಟಕ, ಪ್ರಬಂಧ, ಸಂದರ್ಶನ, ಸಂಶೋಧನೆ, ಸಂಪಾದನೆ ಮತ್ತು ಅನುವಾದ ಪ್ರಕಾರಗಳಲ್ಲಿ ಈವರೆಗೆ 24 ಕೃತಿಗಳನ್ನು ರಚಿಸಿದ್ದಾರೆ